**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.</u>**

**ಪ್ರಶ್ನೆ:**

**ಮಡಿಕೇರಿಯಲ್ಲಿ 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಛಯ ಭವನ ನಿರ್ಮಾಣದ ಕಾಮಗಾರಿಯನ್ನು ಮುಕ್ತಾಯಗೊಳಿಸಿ, ಲೋಕಾರ್ಪಣೆ ಗೊಳಿಸುವ ಬಗ್ಗೆ.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 609 ಕಸಧ 2012 ದಿ:24.05.2013ರ ಆದೇಶದಲ್ಲಿ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಸುವರ್ಣ ಸಮುಚ್ಛಯ ಭವನ ನಿರ್ಮಾಣಕ್ಕೆ ರೂ.400.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ.307.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಸರ್ಕಾರದ ಆದೇಶ ಸಂ:ಕಸಂವಾ 81 ಕೆಓಎಲ್ ಆಕ 2020, ದಿನಾಂಕ:26.11.2020ರಲ್ಲಿ ಸದರಿ ಭವನದ ಮುಂದುವರಿದ ಕಾಮಗಾರಿಗೆ ರೂ.500.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ರೂ.500.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಒಟ್ಟಾರೆ ಸದರಿ ಕಾಮಗಾರಿಗೆ ರೂ.807.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ದಿನಾಂಕ:14.03.2025ರ ಪತ್ರದಲ್ಲಿ, ಈ ಕಾಮಗಾರಿ ನಿರ್ಮಾಣಕ್ಕೆ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ ಇವರಿಗೆ ವಹಿಸಲಾಗಿದ್ದು, ಲೋಕೋಪಯೋಗಿ ಇಲಾಖೆಗೆ ರೂ.707.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಹಾಗೂ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಇನ್ನು ರೂ.100.00ಲಕ್ಷಗಳು ಲಭ್ಯವಿರುವುದಾಗಿ ತಿಳಿಸಿರುತ್ತಾರೆ.

ನಿರ್ಮಾಣವಾಗುತ್ತಿರುವ ಸುವರ್ಣ ಸಾಂಸ್ಕೃತಿಕ ಸಮುಚ್ಛಯ ಭವನದದಲ್ಲಿ,

1) "ಬೇಸ್ ಮೆಂಟ್"ನಲ್ಲಿ ವಾಹನ ನಿಲುಗಡೆ, ಕೊಡವ ಅಕಾಡೆಮಿ ಕಚೇರಿಗಳು, ಗ್ರಂಥಾಲಯ ಮತ್ತು ಸಭಾಂಗಣಗಳಿರುತ್ತವೆ.
2) "ನೆಲಮಹಡಿ"ಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿ, ಅರೆಭಾಷೆ ಕಚೇರಿ ಅಕಾಡೆಮಿ, ಮ್ಯೂಸಿಯಂ, ಆರ್ಟ್ ಗ್ಯಾಲರಿ ಮತ್ತು ಲಾಂಜ್‌ಗಳು ಇರುತ್ತವೆ.
3) ಮೊದಲನೇ ಮಹಡಿಯಲ್ಲಿ ಗ್ರೀನ್ ರೂಂ ಒಳಗೊಂಡಂತೆ ವಿಶಾಲವಾದ ಆಡಿಟೋರಿಯಂ ಮತ್ತು
4) ಎರಡನೇ ಮಹಡಿಯಲ್ಲಿ ಡಾರ್ಮೆಟ್ರಿಯನ್ನು ಒಳಗೊಂಡು ಒಟ್ಟು 4 ಹಂತದಲ್ಲಿ ನಿರ್ಮಿಸಲಾಗುತ್ತಿದೆ.

ಸಮುಚ್ಛಯದ ಹೊರಾಂಗಣ, ಒಳಾಂಗಣ ಮತ್ತು ಮೇಲ್ಛಾವಣಿ ಕಾಮಗಾರಿಯು ಮುಕ್ತಾಯವಾಗಿದ್ದು, ಒಳಾಂಗಣದ ಫಾಲ್ ಸೀಲಿಂಗ್, ವೇದಿಕೆ, ಸ್ಕ್ರೀನ್, ಲೈಟಿಂಗ್, ಧ್ವನಿ ವರ್ಧಕ, ಆಸನಗಳು, ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಆಡಿಟೋರಿಯಂನ ಹೊರವಲಯದಲ್ಲಿ ಶೌಚಾಲಯ ಕೊಠಡಿಗಳ ನಿರ್ಮಾಣ ಕಾಮಗಾರಿಗಳು ಬಾಕಿಯಿರುತ್ತವೆ.

....2

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ ಇವರು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಬರೆದ ದಿನಾಂಕ:20.01.2025ರ ಪತ್ರದಲ್ಲಿ ಫೆಬ್ರುವರಿ 2025ರ ಅಂತ್ಯದೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. (ಅನುಬಂಧದಲ್ಲಿರಿಸಿದೆ).

ಸಂಖ್ಯೆ: ಕಸಂವಾ 42 ಕವಿಸ 2025.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯಾ
ಕೊಡಗು ಜಿಲ್ಲೆ, ಮಡಿಕೇರಿ.

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್ : 08272-225900
ಈ-ಮೈಲ್: deo.kodagu@gmail.com
ವೆಬ್‌ಸೈಟ್: http://www.kodagu.nic.in

ಸಂಖ್ಯೆ: ಸನಿ/ಕಸಂಇ/ಕೊ/50/2014-15 ದಿನಾಂಕ: 14-03-2025

ಗೆ,

ಮಾನ್ಯ ಕಾರ್ಯದರ್ಶಿಗಳು
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ, ಕಟ್ಟಡ
3ನೇ ಮಹಡಿ, ಕೆ.ಜಿ.ರಸ್ತೆ,
ಬೆಂಗಳೂರು-560009.

ಮಾನ್ಯರೇ,

ವಿಷಯ: ಮಡಿಕೇರಿನಗರದಲ್ಲಿ ನಿರ್ಮಾಣವಾಗುತ್ತಿರುವ ಜಿಲ್ಲಾ ಸಮುಚ್ಚಯ ಭವನದ ಕಾಮಗಾರಿ ಬಗ್ಗೆ.

ಉಲ್ಲೇಖ: 1) ಪತ್ರದ ಸಂಖ್ಯೆ: ಸ.ನೀ.ವಿ&ತ/ಸ/1401/2025,ದಿ:13-03-2025
2) ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಡಿಕೇರಿ ಇವರ ಪತ್ರ ಸಂಖ್ಯೆ:ಕಾ.ಇ/ಲೋ.ಇ/ಕೊವಿ/ಮಡಿಕೇರಿ/ಎ-3/ಎಸ್.ಎಸ್.ಬಿ/2024-25/ 3049-51 ,ದಿನಾಂಕ: 20-01-2025.

------

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರ (1) ಸದನದ ಶೂನ್ಯ ವೇಳೆ ಭರವಸೆ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರದಲ್ಲಿ ನಿರ್ಮಾಣವಾಗುತ್ತಿರುವ ಜಿಲ್ಲಾ ಸಮುಚ್ಚಯ ಭವನದ ಕಾಮಗಾರಿಯ ಪ್ರಗತಿ ವಿವರದ ಮಾಹಿತಿಯನ್ನು ಉಲ್ಲೇಖ (2) ರ ಅನುಷ್ಠಾನಾಧಿಕಾರಿಯವರಿಂದ ಪಡೆಯಲಾಗಿದೆ ವರದಿ ಈ ಕೆಳಕಂಡಂತಿದೆ.

| ಕ್ರ.ಸಂ | ವಿಧಾನ ಪರಿಷತ್ ಸದಸ್ಯರು | ದಿನಾಂಕ | ವಿವರ | ಉತ್ತರ |
|---|---|---|---|---|
| 1 | ಕುಶಾಲಪ್ಪ.ಎಂ.ಪಿ. (ಸುಜಾ) | 04-03-2025 | ಮಡಿಕೇರಿಯಲ್ಲಿ 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಚಯ ಭವನ ನಿರ್ಮಾಣದ ಕಾಮಗಾರಿಯನ್ನು ಮುಕ್ತಾಯಗೊಳಿಸಿ, ಲೋಕಾರ್ಪಣೆಗೊಳಿಸುವ ಬಗ್ಗೆ. | ಸರ್ಕಾರದಿಂದ ರೂ.307.00 ಲಕ್ಷ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ರೂ. 500.00 ಲಕ್ಷ ಒಟ್ಟು ರೂ. 807.00 ಲಕ್ಷಗಳು 04 ಕಂತುಗಳಲ್ಲಿ ಬಿಡುಗಡೆಯಾಗಿದ್ದು, ಹೊರಾಂಗಣ ಹಾಗೂ ಒಳಾಂಗಣ ಕೊಠಡಿಗಳು ಹಾಗೂ ಇತರೇ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>ವೇದಿಕೆಗೆ ಸಂಬಂಧಿಸಿದಂತೆ ಮೇಲ್ಹಾವಣಿ, ಒಳಾಂಗಣದ ವೇದಿಕೆಯ ಬ್ರೇಡ್ಸ್, ಸ್ಕ್ರೀನ್, ಲೈಟಿಂಗ್, ಧ್ವನಿವರ್ಧಕ, ಕುರ್ಚಿಗಳು ಸಭಾಂಗಣಕ್ಕೆ ಅಳವಡಿಸುವ ಕಾರ್ಯಪ್ರಗತಿಯಲ್ಲಿರುತ್ತದೆ. ಹಾಗೂ ಆಡಿಟೋರಿಯಂಗೆ ಒಳಪಟ್ಟಂತೆ ಹೊರ ವಲಯದಲ್ಲಿರುವ ಶೌಚಾಲಯಗಳು, ಕೊಠಡಿಗಳು ಪೂರ್ಣಮಟ್ಟದ ಕೆಲಸ ಬಾಕಿ ಇರುತ್ತದೆ. |

| | | | | |
|---|---|---|---|---|
| | | | | ಕಾಮಗಾರಿ ಕೆಲಸ ನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ಇಲ್ಲಿಯವರೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಒಟ್ಟು ರೂ. 807.00 ಲಕ್ಷಗಳಲ್ಲಿ ರೂ.707.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿಕೆ ರೂ.100.00 ಲಕ್ಷ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿರುತ್ತದೆ. ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. |

ತಮ್ಮ ನಂಬುಗೆಯ

ಅಪರ ಜಿಲ್ಲಾಧಿಕಾರಿ
ಕೊಡಗು ಜಿಲ್ಲೆ, ಮಡಿಕೇರಿ.